ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ, ಕುಂದಾಪುರ
ಸಿ.ಸಿ. ನಂಬ್ರ:2319/2017

ಚಾಸಾ:4 ಪ್ರಾಸಾ:2

ದಿನಾಂಕ: 16.10.2025

| | | |
|---|---|---|
| ವಾಗ್ಮೂಲದವರ ಹೆಸರು | : | ಶ್ರೀ ಚಂದ್ರ ದೇವಾಡಿಗ |
| ತಂದೆಯ ಹೆಸರು | : | ಮಂಜು ದೇವಾಡಿಗ |
| ವಯಸ್ಸು | : | 34 ವರ್ಷ |
| ಉದ್ಯೋಗ | : | ರಿಕ್ಷಾ ಚಾಲಕ |
| ವಾಸ ಸ್ಥಳ | : | ವಕ್ವಾಡಿ |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ.ರವರಿಂದ:**

ಚಾಸಾ-1 ರವರ ಪರಿಚಯವಿಲ್ಲ. ಆರೋಪಿತರ ಪರಿಚಯವಿಲ್ಲ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ. ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ. ಸಾಕ್ಷಿ ಮುಮಾ1 ಮತ್ತು 2ನ್ನು ತೋರಿಸಿದ್ದು ಅವುಗಳನ್ನು ನೋಡಿ ಗುರುತಿಸಿಲ್ಲ.

**(ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಗೆ ವಿರುದ್ದವಾಗಿ ಸಾಕ್ಷಿ ನುಡಿದಿದ್ದರಿಂದ ಮಾನ್ಯ ಸ.ಸ.ಅ.ರವರು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ವಾಟೀ ಸವಾಲಿಗೆ ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು.)**

**ವಾಟೀ ಸವಾಲು: ಮಾನ್ಯ ಸ.ಸ.ಅ.ರವರಿಂದ:**

ದಿ: 16-06-2017 ರಂದು ಸಂಜೆ 5-20ರ ಸಮಯದಲ್ಲಿ ನಾನು ಮನೆಯಲ್ಲಿ ಇದ್ದಾಗ ಚಾಸಾ-1 ರವರು ಅಲ್ಲಿಗೆ ಬಂದು ಅಸೋಡು ಗ್ರಾಮದಲ್ಲಿ ಚಂದ್ರ ಆಚಾರಿ ಎಂಬುವರ ಮನೆಗೆ ಹೋಗಬೇಕು ಎಂದು ಹೇಳಿ ನಮ್ಮ ಪರಿಚಯಸ್ಥರಾದ ಆರೋಪಿತರನ್ನು ಕರೆದುಕೊಂಡು ಹೋಗಲು ಬಂದಾಗ ಕೆಂಪು ಕಾರು ರಸ್ತೆಯಲ್ಲಿ ನಿಂತಿದ್ದು ಅದರ ಬಳಿ ಆರೋಪಿತರು ಇದ್ದು, ನಮ್ಮ ವಾಹನ ಬರುತ್ತಿದ್ದಂತೆ ತಡೆದು ನಿಲ್ಲಿಸಿ ಚಾಸಾ-1 ರವರು ಏನೆಂದು ಕೇಳಲು ಸೀಟಿನಿಂದ ಕೆಳಗೆ ಇಳಿದಾಗ ಆತನನ್ನು ಕುರಿತು ಅವಾಚ್ಯವಾಗಿ ನಿಂಧಿಸಿ ಕೈಯಿಂದ ಮುಖಕ್ಕೆ, ಬೆನ್ನಿಗೆ ಹೊಡೆಯಲು ಪ್ರಾರಂಭಿಸಿದ್ದು, 1ನೇ ಆರೋಪಿ ಹೆಂಚಿನ ತುಂಡಿನಿಂದ ಚಾಸಾ-1 ರವರ ಮುಖ ಮತ್ತು ಎಡಗಣ್ಣಿಗೆ ಹೊಡೆದು ಕಾರಿನಲ್ಲಿ ಕೂರಿಸಿಕೊಂಡು ಕಾಳವಾರದ ಕಡೆಗೆ ವೇಗವಾಗಿ ಹೋಗಿದ್ದು,

ಸದ್ರಿ ಕಾರನ್ನು 3ನೇ ಆರೋಪಿ ಚಲಾಯಿಸುತ್ತಿದ್ದು, ಹಿಂಭಾಗದಲ್ಲಿ 1 ಮತ್ತು 2ನೇ ಆರೋಪಿತರು ಚಾಸಾ-1 ರವರನ್ನು ಕೆಎ-19-ಎಂಎ-1871 ಕಾರಿನಲ್ಲಿ ಕರೆದುಕೊಂಡು ಹೋಗಿದ್ದು ನಾನು ಅನಂತರ ಪಿಕ್ ಅಪ್ ವಾಹನದಲ್ಲಿ ಮನೆಗೆ ಹೋಗಿರುತ್ತೇನೆ ಎಂದರೆ ಸರಿಯಲ್ಲ.

ಸಂಜೆ ವೇಳೆಗೆ ಚಾಸಾ-1 ರವರು ಸರಕಾರಿ ಆಸ್ಪತ್ರೆಗೆ ದಾಖಲಾಗಿರುವ ವಿಚಾರ ನನಗೆ ತಿಳಿದು ಬಂದಿದ್ದು, ವಿಚಾರಿಸಿದಾಗ 1ನೇ ಆರೋಪಿ ಕಾರಿನಲ್ಲಿ ಬಸ್ರೂರು ಮೂರುಕೈ ಕೋಟೇಶ್ವರ ಹಾಗೂ ಇತರೆ ಜಾಗಗಳಿಗೆ ಕರೆದುಕೊಂಡು ಹೋಗಿ ಆತ ನನ್ನನ್ನು ನೋಡಿ ಕೂಗಿಕೊಂಡಾಗ ಅಲ್ಲೇ ಇಳಿಸಿ ಕಾರಿನ ಬಳಿ ಇದ್ದ ಪೈಪಿನಲ್ಲಿ 2ನೇ ಆರೋಪಿ ತಲೆ, ಕೈ, ಬೆನ್ನಿನ ಭಾಗಕ್ಕೆ ಹೊಡೆದು ಹಲ್ಲೆ ಮಾಡಿರುವುದಾಗಿ ತಿಳಿಸಿದ್ದು, 2 ದಿನಗಳ ಹಿಂದೆ 1 ಮತ್ತು 2ನೇ ಆರೋಪಿತರು ಮನೆಯ ಬಳಿ ಜೋರಾಗಿ Sterio ಹಾಡನ್ನು ಹಾಕಿದ್ದು, ಅದನ್ನು ಆಕ್ಷೇಪಿಸಿದ ಕಾರಣ ಆತನನ್ನು ಈ ರೀತಿ ಹಲ್ಲೆ ಮಾಡಿರುವುದಾಗಿ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ಈ ಬಗ್ಗೆ ನಾನು ದಿಃ 18-06-2017ರಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದ್ರಿ ಹೇಳಿಕೆಯನ್ನು ನಿಪಿ-2 ಎಂದು ಗುರುತಿಸಲಾಯಿತು. ಆರೋಪಿತರು ನನ್ನ ಪರಿಚಯಸ್ಥರಾದ ಕಾರಣಕ್ಕೆ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ವಾಟೀ ಸವಾಲುಃ ಆರೋಪಿತರ ಪರ ವಕೀಲರು ವಾಟೀ ಸವಾಲು ಇಲ್ಲ ಎಂದು ನುಡಿದಿರುತ್ತಾರೆ.**

**ಮರು ವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ. ದ. ನ್ಯಾ. ದಂ. ಕುಂದಾಪುರ**